ದೇಶದಾದ್ಯಂತ ಕೇಬಲ್ ಟೀವಿ ಜಾಲ ಹೊಂದಿರುವ ಟಾಟಾ ಸಮೂಹದ 'ಟಾಟಾ ಸ್ಕೈ' (ಈಗ ಟಾಟಾ ಪ್ಲೇ) ತನ್ನ ಸೇವೆಯನ್ನು ಉತ್ಕೃಷ್ಟಗೊಳಿಸಲು ಉಪಗ್ರಹವೊಂದರ ಹುಡುಕಾಟದಲ್ಲಿತ್ತು. ಆಗ ಕಂಡದ್ದು ಇಸ್ರೋ. ಇಸ್ರೋದ ಮುಂದೆ ಬೇಡಿಕೆ ಇರಿಸಿದ್ದೇ ತಡ, ಟಾಟಾ ಸಮೂಹಕ್ಕಾಗಿ **GSAT–24** ಎಂಬ ಸಂವಹನ ಉಪಗ್ರಹವನ್ನು ಇಸ್ರೋ ಕಳೆದ ಜೂನ್ 24ರಂದು ಫ್ರೆಂಚ್ ಗಯಾನದ ಕೊವ್ರೋ‌ರ್ ಉಡಾವಣಾ ನೆಲೆಯಿಂದ ಹಾರಿಸಿಯೇ ಬಿಟ್ಟಿತು. ಐದು ದಿನಗಳ ನಂತರ ಜೂನ್ 30ರಂದು ಸಿಂಗಪುರ ಸರ್ಕಾರದ ಎರಡು **DS – EO** ಮತ್ತು **NEUSAR)** ಮತ್ತು ಸಿಂಗಪುರ 'ನನ್ಯಾಂಗ್ ಟೆಕ್ನಾಲಜಿಕಲ್ ಯೂನಿವರ್ಸಿಟಿ'ಯ ವಿದ್ಯಾರ್ಥಿಗಳು ತಯಾರಿಸಿದ 'ಸ್ಕೂಬಾ–1' ಎಂಬ ಉಪಗ್ರಹಗಳನ್ನು ತನ್ನ **PSLV – C53** ಮೂಲಕ ಲಾಂಚ್ ಮಾಡಿದ ಇಸ್ರೋ, ಇನ್ನು ಮುಂದೆ ಬಾಹ್ಯಾಕಾಶದ ಮಹತ್ವದ ಕೆಲಸಗಳಿಗೆ ಖಾಸಗಿ ಸಹಭಾಗಿತ್ವಕ್ಕೂ ಬಾಗಿಲು ತೆರೆಯಲಿದೆ ಎಂಬ ಸಂದೇಶ ರವಾನಿಸಿದೆ.

ದೇಶದ ಬಾಹ್ಯಾಕಾಶ ಸಂಶೋಧನೆ ಮತ್ತು ಚಟುವಟಿಕೆಗಳ ಕ್ಷೇತ್ರ ರಾಕೆಟ್ ವೇಗದಲ್ಲಿ ಖಾಸಗೀಕರಣಗೊಳ್ಳುತ್ತಿದೆ. ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಬಾಹ್ಯಾಕಾಶ ಸಂಶೋಧನೆ ಮತ್ತು ಚಟುವಟಿಕೆಗಳನ್ನು ಖಾಸಗಿ ವಲಯಕ್ಕೆ ವಿಸ್ತರಿಸುವ ಯೋಜನೆ ರೂಪಿಸಿ, ಅದರ ನೇರ ಉಸ್ತುವಾರಿಗಾಗಿ 'ಇಂಡಿಯನ್ ನ್ಯಾಷನಲ್ ಸ್ಪೇಸ್ ಪ್ರೊಮೋಷನ್ ಅಂಡ್ ಆಥರೈಸೇಶನ್ ಸೆಂಟರ್' **(IN – SPACe)** ಮತ್ತು 'ನ್ಯೂ ಸ್ಪೇಸ್ ಇಂಡಿಯ ಲಿಮಿಟೆಡ್' **(NSIL)** ಎಂಬ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಮೂಲಕ ಖಾಸಗಿ ವಲಯದ ಪ್ರಾತಿನಿಧಿಕ ಉದ್ಯಮಗಳಿಗೆ ಪ್ರೋತ್ಸಾಹಿಸಲು ಉದ್ದೇಶಿಸಿದೆ. ದೇಶದ ವೈಜ್ಞಾನಿಕ ಸಾಧನೆ ಎಂದರೆ ಬಾಹ್ಯಾಕಾಶ ಕ್ಷೇತ್ರದ ಸಾಧನೆ ಎನ್ನುವಷ್ಟರ ಮಟ್ಟಿಗೆ ಹೆಸರು ಮಾಡಿರುವ ಇಸ್ರೋ, ಬಾಹ್ಯಾಕಾಶ ತಂತ್ರಜ್ಞಾನ ಪ್ರಸರಣ ಮತ್ತು ಆರ್ಥಿಕತೆಯನ್ನು ಮುನ್ನೆಲೆಗೆ ತರಲು ಈ ಮಹತ್ವದ ಹೆಜ್ಜೆ ಇರಿಸಿದೆ.

ಈಗಾಗಲೇ ದೇಶದ ನವೋದ್ಯಮಗಳು ಸೇರಿದಂತೆ 350ಕ್ಕೂ ಹೆಚ್ಚು ಖಾಸಗಿ ಕಂಪನಿಗಳು ದೇಶದ ಬಾಹ್ಯಾಕಾಶ ಕ್ಷೇತ್ರಕ್ಕೆ ಕಾಲಿರಿಸಿವೆ. ಖಾಸಗಿ ಸಹಭಾಗಿತ್ವದ ವಿಷಯದಲ್ಲಿ ವಿಶ್ವದ ಮೊದಲ ಹತ್ತು ದೇಶಗಳ ಪಟ್ಟಿಯಲ್ಲಿ ಭಾರತ ಐದನೆಯ ಸ್ಥಾನದಲ್ಲಿದೆ. ಮೊದಲ ನಾಲ್ಕು ಸ್ಥಾನಗಳಲ್ಲಿ ಅಮೆರಿಕ, ಇಂಗ್ಲೆಂಡ್, ಕೆನಡ ಮತ್ತು ಜರ್ಮನಿಗಳಿವೆ. ಜಪಾನ್, ಚೀನಾ, ಯೂರೋಪುಗಳು ನಂತರದ ಸ್ಥಾನದಲ್ಲಿವೆ. ಎರಡು ವರ್ಷಗಳ ಹಿಂದೆ ಕೆಲವೇ ಕೆಲವು ನವೋದ್ಯಮಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದವು. ಎರಡು ವರ್ಷಗಳಲ್ಲಿ ಅವುಗಳ ಸಂಖ್ಯೆ ನೂರು ದಾಟಿದೆ.

## ಬಾಹ್ಯಾಕಾಶದ ಹೊಸ ದಾರಿಗಳು

ಇದುವರೆಗೂ ಇದ್ದ 'ಸಪ್ಲೈ ಬೇಸ್ಡ್ ಮಾಡೆಲ್' (ಸರಬರಾಜು ಆಧರಿತ ಮಾದರಿ) ಬದಲಿಗೆ 'ಡಿಮ್ಯಾಂಡ್ ಬೇಸ್ಡ್ ಮಾಡೆಲ್' (ಬೇಡಿಕೆ ಆಧಾರಿತ ಮಾದರಿ) ಪ್ರಾರಂಭಿಸುವ ಮುಖ್ಯ ಉದ್ದೇಶವಿದ್ದು, ಯಾರಿಗೆ ಯಾವ ಅವಶ್ಯಕತೆ ಇದೆ ಎಂಬುದನ್ನು ಬೇಡಿಕೆ ರೂಪದಲ್ಲಿ ಸ್ವೀಕರಿಸುವ ಕೆಲಸ 'ಎನ್‌ಎಸ್‌ಐಎಲ್'ನದು. ಬಾಹ್ಯಾಕಾಶ ಇಲಾಖೆಯಿಂದ ಪರವಾನಿಗೆ ರೂಪದ ಮಾಲೀಕತ್ವ ಪಡೆದುಕೊಂಡು ಕೃತಕ ಉಪಗ್ರಹ ನೌಕೆಗಳನ್ನು ಹಾರಿಸುವುದು, ಸಂಬಂಧಿಸಿದ ಸೇವೆಗಳನ್ನು ಒದಗಿಸುವುದು ಎರಡನೆಯ ಕೆಲಸ. ಖಾಸಗಿ ಸಂಸ್ಥೆಗಳಿಗೆ 'ಇಂಡಿಯನ್ ನ್ಯಾಷನಲ್ ಸ್ಪೇಸ್ ಪ್ರೊಮೋಶನ್ ಅಂಡ ಆಥರೈಸೇಶನ್ ಸೆಂಟರ್' ನೇತೃತ್ವದಲ್ಲಿ ಬಾಹ್ಯಾಕಾಶ ಚಟುವಟಿಕೆಗಳಿಗೆ ಅವಕಾಶ ನೀಡಿ ನಿಗಾವಹಿಸುವುದು ಮೂರನೆಯ ಕೆಲಸ. ಇದರ ಜೊತೆ ಬಾಹ್ಯಾಕಾಶ ಚಟುವಟಿಕೆ ನಡೆಸಬಯಸುವ ಖಾಸಗಿ ಉದ್ಯಮಗಳ ಸಾಮರ್ಥ್ಯ ನಿರ್ಮಾಣದ ಜವಾಬ್ದಾರಿಯೂ 'ಎನ್‌ಎಸ್‌ಐಎಲ್' ಮೇಲಿದೆ.

ಬಾಹ್ಯಾಕಾಶ ಕ್ಷೇತ್ರಕ್ಕೆ ಕಾಲಿಟ್ಟಿರುವ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಉತ್ಸುಕತೆ



